**ರಾಜಿ ಅರ್ಜಿಯ ಮೇರೆಗೆ ಆದೇಶ**

ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ, ವಾದಿ ಮತ್ತು ಪ್ರತಿವಾದಿಯರು ಒಂದೇ ಗ್ರಾಮದವರಾಗಿದ್ದು, ಪ್ರತಿವಾದಿಯ ದರದು ನಿಮಿತ್ಯವಾಗಿ ಅಂದರೆ ಜಮೀನಿಗೆ ಬೋರ್ ಹಾಕಿಸುವ ಉದ್ದೇಶವಾಗಿ ದಾವಾ ಷೆಡ್ಯೂಲ್ ಸ್ವತ್ತನ್ನು ನಗದು ಗೌರ್ನಮೆಂಟ್ ರೂ.1,00,000/- ಗಳಿಗೆ ವಾದಿಗೆ ಆಧಾರ ಮಾಡಿ, ಆಧಾರ ಬಾಬ್ತು ಪೂರ್ತಾ ಮೊಬಲಗು ರೂ.1,00,000/- ಪಡೆದುಕೊಂಡಿರುತ್ತಾರೆ. ಆದ ಕಾರಣ ಆಧಾರದ ಬಾಬ್ತು ಪೂರ್ತಾ ಹಣ ಸಂದಾಯವಾಗಿರುವ ಕಾರಣ ಈ ಬಾಬ್ತು ಮೊಬಲಿಗೆ ಶೇಕಡಾ ಮಾಹೆಯಾನ 2% ಗಳಂತೆ ಬಡ್ಡಿ ಕೊಡಲು ಒಪ್ಪಿ ಒಂದು ನೋಂದಾಯಿತ ಜಮೀನಿನ ಆಧಾರದ ಪತ್ರವನ್ನು ದಿನಾಂಕಃ 18.07.2014 ರಂದು ವಾದಿಗೆ ಬರೆದುಕೊಟ್ಟಿರುತ್ತಾರೆ.

ತದನಂತರ ಪ್ರತಿವಾದಿಯು ವಾದಿಗೆ ಯಾವುದೇ ಬಡ್ಡಿಯನ್ನು ಪಾವತಿ ಮಾಡಿರುವುದಿಲ್ಲ. ಸದರಿ ಆಧಾರದ ಬಾಬ್ತು ಪೂರ್ತಾ ಹಣ ಮತ್ತು ಶೇಕಡಾ ಮಾಹೆಯಾನ 2% ಗಳಂತೆ ಬಡ್ಡಿಯನ್ನು ವಾದಿ ಮತ್ತು ಪ್ರತಿವಾದಿಯ ಕುಟುಂಬದ ಹಿತೈಶಿಗಳು ಮತ್ತು ಗ್ರಾಮದ ಹಿರಿಯರು ನೀಡಿರುವ ಸಲಹೆ ಸೂಚನೆ ಮೇರೆಗೆ ವಾದಿಗೆ ಪ್ರತಿವಾದಿಯು ರೂ.2,60,000/- (ಎರಡು ಲಕ್ಷದ ಆರವತ್ತು ಸಾವಿರಗಳನ್ನು) ಪಾವತಿ ಮಾಡಿರುತ್ತಾರೆ ಎಂಬುದನ್ನು ವಾದಿ ಪ್ರತಿವಾದಿಯು ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ.

ಈ ರಾಜಿ ಅರ್ಜಿಯಂತೆ ವಾದಿಗೆ ಪ್ರತಿವಾದಿಯು ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ದಿನಾಂಕಃ 18.07.2014 ರ ಆಧಾರಪತ್ರವನ್ನು ಪ್ರತಿವಾದಿಗೆ ಬಿಡುಗಡೆ

ಮಾಡಿಕೊಡಲು ವಾದಿಯು ಒಪ್ಪಿ ಕೊಂಡಿರುತ್ತಾರೆ.

ಈ ಆಧಾರಪತ್ರದ ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ಹಕ್ಕು, ಸ್ವಾಧೀನ ಇರುವುದಿಲ್ಲ ಎಂದು ಒಪ್ಪಿ ಸಹಿ ಮಾಡಿರುತ್ತಾರೆ. ಒಂದು ವೇಳೆ ಆಧಾರಪತ್ರದ ಬಿಡುಗಡೆ ಪತ್ರವನ್ನು ಬರೆದುಕೊಡಲು ವಾದಿಯು ವಿಫಲವಾದ್ದಲ್ಲಿ ನ್ಯಾಯಾಲಯದ ಒಬ್ಬ ವಕೀಲರನ್ನು ನ್ಯಾಯಾಲಯದ ಆಯುಕ್ತರಾನ್ನಾಗಿ ನೇಮಕವಾಡಿ ಪ್ರತಿವಾದಿಯು ಆಧಾರ ಪತ್ರದ ಬಿಡುಗಡೆ ಪತ್ರ ಬರೆಸಿಕೊಳ್ಳಲು ಪ್ರತಿವಾದಿಯ ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಒಪ್ಪಿ ಕೊಂಡಿರುತ್ತಾರೆ.

## ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಅಕ್ಕಿಹೆಬ್ಬಾಳು ಹೋಬಳಿ, ಹೊನ್ನೇನಹಳ್ಳಿ  ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂ.25/1 ಬಿ2 ರಲ್ಲಿ ವಿಸ್ತೀರ್ಣ 0-26 ಗುಂಟೆ ಜಮೀನಿಗೆ ಚೆಕ್ಕುಬಂದಿಃ-

ಪೂರ್ವಕ್ಕೆಃ- ನನ್ನ ಬಾಬ್ತು ಬೇರೆ ನಂಬರ್ ಜಮೀನು,
ಪಶ್ಚಿಮಕ್ಕೆಃ- ಈರಾಚಾರಿ ರವರ ಜಮೀನು,
ಉತ್ತರಕ್ಕೆಃ- ಮರಿಯಣ್ಣನ ಕುಮಾರ ರವರ ಜಮೀನು,
ದಕ್ಷಿಣಕ್ಕೆಃ- ಗಿಡ್ಡೇಗೌಡ ರವರ ಜಮೀನು.

ಈ ದಾವೆಯನ್ನು ಉಭಯಪಕ್ಷಗಾರರು ಮುಕ್ತ ಸಮ್ಮತಿಯಿಂದ ರಾಜೀ ಮಾಡಿಕೊಂಡಿರುತ್ತಾರೆಯೇ ಹೊರತು ಬೇರೆ ಯಾರ ಒತ್ತಾಯಕ್ಕೆ ಒಳಗಾಗಿ ಚಿತಾವಣೆಗೆ ಒಳಗಾಗಿ ಮಾಡಿಕೊಂಡಿರುವುದಿಲ್ಲ ಎಂದು ಮುಕ್ತ ಸಮ್ಮತಿಯಿಂದ ವಾದಿ ಮತ್ತು ಪ್ರತಿವಾದಿಯು ಒಪ್ಪಿ ಕೊಂಡಿರುತ್ತಾರೆ.

:: **ಆದೇಶ** ::

ವಾದಿಯು ದಾಖಲು ಮಾಡಿರುವ ಈ ದಾವೆಯನ್ನು ರಾಜಿ ಅರ್ಜಿಯ ಮುಖೇನ ವಿಲೇವಾರಿ ಮಾಡಲಾಗಿದೆ. ರಾಜಿ ಅರ್ಜಿಯು ತೀರ್ಪಿನ ಒಂದು ಭಾಗವಾಗಿರುತ್ತದೆ. ಅದರಂತೆ ಡಿಕ್ರಿಯನ್ನು ಬರೆಯಿರಿ.

**(ಶ್ರೀಮತಿ.ಸುಷ್ಮಾ.ಸಿ.)**
1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಕೆ.ಆರ್.ಪೇಟೆ.

Counsel for plaintiff has filed memo for refund of Court Fee Perused the memo. Satisfied as to the cause shown in the memo. By placing reliance on ***The High Court of Judicatory at Madras, represented by its Registrar General Vs. M.C.Subramaniam and others, in Civil Appeal No.3063-3064 of 2001*** Plaintiff is entitled for entire Court Fee.

Office is hereby directed to refund the entire court fee paid by the plaintiff to plaintiff after profer identification of the parties.

I Addl. Civil Judge and JMFC.,
K.R.Pete